**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 2161/2022**

ಚಾ.ಸಾ-01, ಪ್ರಾ.ಸಾ-01

| | | |
|---|---|---|
| ಹೆಸರು | : | ಪಾರ್ವತಮ್ಮ |
| ಗಂಡನ ಹೆಸರು | : | ಲೇಟ್ ನಂಜಯ್ಯ |
| ವಯಸ್ಸು | : | 65 |
| ವೃತ್ತಿ | : | ಗೃಹಿಣಿ |
| ವಾಸ | : | ನೆರಗ್ಯಾತನಹಳ್ಳಿ ಗ್ರಾಮ, ತಿ. ನರಸೀಪುರ ತಾಲ್ಲೂಕು |

**ದಿನಾಂಕ 17.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಆರೋಪಿತರ ಪರಿಚಯವಿದೆ. ಚಾಸಾ-2 ನನ್ನ ಮಗಳು. ಚಾಸಾ-3 ನನ್ನ ಗಂಡ. ಅವರು ಮರಣ ಹೊಂದಿರುತ್ತಾರೆ. ಚಾಸಾ-4 ರಿಂದ 7 ರವರ ಪರಿಚಯವಿದೆ.

2021 ರ ಏಪ್ರಿಲ್ ತಿಂಗಳಿನ ಒಂದು ದಿನ ರಾತ್ರಿ 8.00 ಗಂಟೆ ಸಮಯದಲ್ಲಿ ನಮ್ಮ ಗ್ರಾಮದಲ್ಲಿರುವ ನನ್ನ ಮನೆಯಿಂದ ನಾನು ಹೊರಗೆ ಬಂದಿದ್ದೆ. ಚಾಸಾ-6 ಮತ್ತು 7 ರವರು ಬೇರೆಯವರ ಜೊತೆ ಜಗಳವಾಡುತ್ತಿದ್ದರು. ಆ ವೇಳೆಗೆ ಹಳೆಯ ದ್ವೇಷದ ಹಿನ್ನೆಲೆಯಲ್ಲಿ 1 ಮತ್ತು 2ನೇ ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಂತರ 1ನೇ ಆರೋಪಿತ ನನ್ನನ್ನು ಬಗ್ಗಿಸಿ ಹಿಡಿದು ನನ್ನ ತಲೆ ಕೂದಲನ್ನು ಹಿಡಿದು ನನ್ನನ್ನು ಕೆಳಕ್ಕೆ ಕೆಡವಿರುತ್ತಾರೆ. 4ನೇ ಆರೋಪಿತ ನನಗೆ ಅವಾಚ್ಯ ಶಬ್ದಗಳಿಂದ ಬೈದು, ಕೊಲೆ ಬೆದರಿಕೆ ಹಾಕಿರುತ್ತಾನೆ. ಆ ವೇಳೆಗೆ ನನ್ನ ಗಂಡ

ಬಂದಿದ್ದು, ಅವರನ್ನು 4ನೇ ಆರೋಪಿತ ಮೋರಿಗೆ ಹಾಕಿರುತ್ತಾನೆ. ಆ ಪರಿಣಾಮ ನನ್ನ ಗಂಡನ ತಲೆಗೆ, ಕಪಾಲಕ್ಕೆ ಮತ್ತು ಸೊಂಟಕ್ಕೆ ಪೆಟ್ಟಾಗಿರುತ್ತದೆ. 5 ಮತ್ತು 6ನೇ ಆರೋಪಿತರು ಸೇರಿ ನನ್ನ ಮಗಳ ಮುಂದೆಲೆಯನ್ನು ಹಿಡಿದು ಕೆಡವಿರುತ್ತಾರೆ. 3ನೇ ಆರೋಪಿತ ನನಗೆ ಬೆದರಿಕೆ ಹಾಕಿರುತ್ತಾನೆ.

ಘಟನೆಯ ಮರುದಿನ ನಾನು, ನನ್ನ ಗಂಡ ಮತ್ತು ಮಗಳು ಸೇರಿ ತಿ. ನರಸೀಪುರದ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇವೆ. ಘಟನೆಯಾದ ಎರಡು ದಿನಗಳ ನಂತರ ದೂರನ್ನು ನೀಡಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.1 ಮತ್ತು 1(ಎ) ಎಂದು ಗುರುತಿಸಲಾಯಿತು.

ದೂರನ್ನು ನೀಡಿದ 2 ದಿನಗಳ ನಂತರ ಮಧ್ಯಾಹ್ನ 3.00 ಗಂಟೆಗೆ ಪೊಲೀಸರು ಪಂಚನಾಮಕ್ಕೆ ಘಟನಾ ಸ್ಥಳಕ್ಕೆ ಬಂದಿದ್ದು, ಅವರಿಗೆ ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಆ ವೇಳೆಗೆ ನಾನು, ಚಾಸಾ-4 ಮತ್ತು 5 ರವರು ಇದ್ದೆವು. ಪೊಲೀಸರು ಪಂಚನಾಮವನ್ನು ಆ ವೇಳೆಗೆ ಜರುಗಿಸಿರುತ್ತಾರೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.2 ಮತ್ತು 2(ಎ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ಆರೋಪಿತರು ತಮ್ಮ ಕೈಗಳಿಂದ ನನಗೆ ಹೊಡೆದು, ಕಾಲುಗಳಿಂದ ಒದ್ದಿರುತ್ತಾರೆ ಎಂದರೆ ಸರಿ. 4ನೇ ಆರೋಪಿತ ನನ್ನ ಗಂಡನಿಗೆ ಹೊಡೆದು, ಚರಂಡಿಗೆ ತಳ್ಳಿದ್ದರಿಂದ ನನ್ನ ಗಂಡನ ಮಂಡಿಗೆ ಮತ್ತು ಬೆರಳುಗಳಿಗೆ ಪೆಟ್ಟಾಗಿದ್ದವು ಎಂದರೆ ಸರಿ. ಪೊಲೀಸರು ಪಂಚನಾಮಕ್ಕೆ ಬೆಳಿಗ್ಗೆ 10.00 ಗಂಟೆಗೆ ಬಂದಿದ್ದರು ಎಂದರೆ, ಮಧ್ಯಾಹ್ನ 3.00 ಗಂಟೆಗೆ ಬಂದಿದ್ದರು.

**ಪಾಟೀ ಸವಾಲುಃ ಶ್ರೀ ಬಿ.ಎಸ್. ಆರೋಪಿತರ ಪರ ವಕೀಲರಿಂದ**

ನಾನು ಈಗ ಯಾವುದೇ ಕೆಲಸ ಮಾಡುತ್ತಿಲ್ಲ. ನನಗೆ ಒಂದು ಗಂಡು, ಒಂದು ಹೆಣ್ಣು. ನನ್ನ ಮಗಳನ್ನು ಚಿದರವಳ್ಳಿಗೆ ವಿವಾಹ ಮಾಡಿಕೊಟ್ಟಿದ್ದೇವೆ. ಆಕೆಯು ಅದೇ ಗ್ರಾಮದಲ್ಲಿ ವಾಸ ಮಾಡುತ್ತಿದ್ದಾಳೆ. ನನ್ನ ಮಗ ಬೆಂಗಳೂರಿನಲ್ಲಿ ಕಾರಿನ ಚಾಲಕನಾಗಿದ್ದ. ಆತ 4 ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಮರಣ ಹೊಂದಿರುತ್ತಾನೆ. ಆತ ಹೇಗೆ ಮರಣ ಹೊಂದಿದ ಎಂದರೆ ಆರೋಪಿತರೆ ಆತನ ಮರಣಕ್ಕೆ ಕಾರಣರಾಗಿರುತ್ತಾರೆ. ಆತ ಬೆಂಗಳೂರಿನಲ್ಲಿ ನೇಣು ಹಾಕಿಕೊಂಡು

ಮರಣ ಹೊಂದಿರುತ್ತಾನೆ ಎಂದರೆ, ಆರೋಪಿತರ ಹಿಂಸೆಗೆ ಆತ ಮರಣ ಹೊಂದಿರುತ್ತಾನೆ. ಆ ಕುರಿತು ಆರೋಪಿತರ ವಿರುದ್ಧ ನಾನು ದೂರು ನೀಡಿಲ್ಲ.

ನನ್ನ ಮಗ ನಮ್ಮ ಗ್ರಾಮದ ಸಿದ್ದರಾಜು ರವರ ಮಗಳು ರಮ್ಯ ರವರನ್ನು ಪ್ರೀತಿಸುತ್ತಿದ್ದ ಎಂದರೆ ಸರಿಯಲ್ಲ, ಕೇವಲ ಮಾತನಾಡುತ್ತಿದ್ದ. ಆ ವಿಚಾರಕ್ಕೆ ನಮ್ಮ ಮತ್ತು ಸದರಿ ಸಿದ್ದರಾಜು ರವರ ನಡುವೆ ಗಲಾಟೆಯಾಗಿತ್ತು ಎಂದರೆ ಸರಿಯಲ್ಲ. ಆ ಹಿನ್ನೆಲೆಯಲ್ಲಿ ಸದರಿ ಸಿದ್ದರಾಜು ರವರು ಅವರ ಮಗಳಿಗೆ ತಿಳುವಳಿಕೆ ಹೇಳಿದ್ದರು ಎಂದರೆ ಸರಿಯಲ್ಲ. ಸದರಿ ರಮ್ಯರವರು ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ ಎಂದರೆ ಸರಿಯಲ್ಲ.

ಆರೋಪಿತರು ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ಸದರಿ ರಮ್ಯ ಮತ್ತು ಅವರ ತಂದೆ ಸಿದ್ದರಾಜು ರವರು ನನ್ನ ಸಂಬಂಧಿಕರಲ್ಲ ಎಂದರೆ ಸರಿಯಲ್ಲ. ಸದರಿ ರಮ್ಯ ರವರು ಮರಣ ಹೊಂದಿದ ನಂತರ ಆಕೆಯ ಅಂತ್ಯ ಸಂಸ್ಕಾರವನ್ನು ಆರೋಪಿತರ ಜಮೀನಿನಲ್ಲಿ ಮಾಡಲು ಆರೋಪಿತರು ಅವಕಾಶ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಹಾಗಾಗಿ, ಆರೋಪಿತರ ಮೇಲೆ ನಮಗೆ ಮೊದಲಿನಿಂದಲೂ ದ್ವೇಷವಿದೆ ಎಂದರೆ ಅವರು ತಪ್ಪು ಮಾಡಿರುವುದರಿಂದ ದ್ವೇಷವಿದೆ.

ಸದರಿ ರಮ್ಯರವರ ಮರಣ ಹೊಂದಿದ ಎರಡು ತಿಂಗಳ ನಂತರ ಆಕೆಯು ಮರಣ ಹೊಂದಿದ ದಿನಾಂಕದಂದೆ ನನ್ನ ಮಗ ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ

ಎಂದರೆ ಸರಿಯಲ್ಲ. ಆ ಆತ್ಮಹತ್ಯೆ ಪ್ರಕರಣದಲ್ಲಿ ಯಾರ ವಿರುದ್ಧ ದೂರು ನೀಡಲಾಗಿದೆ ಎಂದು ನನಗೆ ಗೊತ್ತಿಲ್ಲ.

ನಾನು ಹೇಳಿ ನನ್ನ ದೂರನ್ನು ಪೊಲೀಸರಿಂದ ಬರೆಸಿರುತ್ತೇನೆ. ಆ ವಿಷಯವನ್ನು ನನ್ನ ದೂರಿನಲ್ಲಿ ಹೇಳಿಲ್ಲ ಎಂದರೆ ಸರಿ. ದೂರಿನಲ್ಲಿ ಬರೆದ ವಿಷಯಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದೂರನ್ನು ಘಟನೆಯಾದ ಎಷ್ಟು ದಿನಗಳ ನಂತರ ನೀಡಿದ್ದೇನೆ ಎಂದು ನನಗೆ ಗೊತ್ತಿಲ್ಲ.

ಪಂಚನಾಮವನ್ನು ಪೊಲೀಸರು ಬರೆದಿರುತ್ತಾರೆ. ಅದರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ಆರೋಪಿತರು ಯಾವುದೇ ಕೃತ್ಯ ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಯಾವುದೇ ಪಂಚನಾಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಮೇಲಿನ ದ್ವೇಷದಿಂದ ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ರಮ್ಯ ರವರ ಶವವನ್ನು ಆರೋಪಿತರ ಜಮೀನಿನಲ್ಲಿ ಹಾಕಿದ್ದರಿಂದ ಮತ್ತು ನನ್ನ ಮಗನ ಶವವನ್ನು ಪಕ್ಕದ ಜಮೀನಿನಲ್ಲಿ ಹಾಕಿದ್ದರಿಂದ ಆರೋಪಿತರ ಮೇಲೆ ನಮಗೆ ದ್ವೇಷ ಬಂದಿದ್ದು, ಆ ಹಿನ್ನೆಲೆಯಲ್ಲಿ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ಘಟನೆಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದ. ತಿ.ನರಸೀಪುರ**